ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/11/ಸುತ್ತೋಲೆ/2022-23/ಸೇವಿ-2 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: ೩೦.05.2022

**ಸುತ್ತೋಲೆ**

ವಿಷಯ: ವಿದೇಶ ಪ್ರವಾಸ ಕೈಗೊಳ್ಳ ಅನುಮತಿ ನೀಡುವ ಕುರಿತು.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ:ಇಡಿ/01/ಯುಇಸಿ/2017, ದಿನಾಂಕ:05.04.2017.
2) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/308/ ಸುತ್ತೋಲೆ/2018-19ಸೇವಿ-2,ದಿನಾಂಕ:30.04.2018.

*****

ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮತ್ತು ಪದವಿ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳಿಗೂ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖ(2) ಈ ಕಛೇರಿಯ ಸುತ್ತೋಲೆಯಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ಕೋರುವ ಪೂರ್ವದಲ್ಲಿ ಪೂರ್ಣ ದಾಖಲೆಗಳನ್ನು/ವಿವರಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ಕಳುಹಿಸುವಂತೆ ಸೂಚಿಸಿದ್ದಾಗ್ಯೂ ಅದರಂತೆ ಕ್ರಮವಹಿಸದೇ ಅಪೂರ್ಣ ಮಾಹಿತಿಯನ್ನು ಒದಗಿಸುತ್ತಾ, ಅನಾವಶ್ಯಕವಾಗಿ ಪತ್ರ ವ್ಯವಹಾರಗಳಿಗೆ ಆಸ್ಪದ ನೀಡಲಾಗುತ್ತಿರುವುದಲ್ಲದೆ ವಿಳಂಬಕ್ಕೂ ಕಾರಣವಾಗುತ್ತಿದೆ. ಆದ್ದರಿಂದ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಲಾಗಿರುವ ಪೂರ್ಣ ದೃಢೀಕೃತ ಮಾಹಿತಿ/ದಾಖಲೆಗಳನ್ನು ಪ್ರಾಂಶುಪಾಲರ ಸಹಿ ಮತ್ತು ಮೊಹರಿನೊಂದಿಗೆ ಕನಿಷ್ಟ ಎರಡು ತಿಂಗಳು ಮುಂಚಿತವಾಗಿ ಪ್ರಸ್ತಾವನೆಗಳನ್ನು ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ ಹಾಗೂ ವಿಳಂಬವಾಗಿ ಹಾಗೂ ಅಪೂರ್ಣ ದಾಖಲೆಗಳನ್ನೊಳಗೊಂಡ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಆ ಪ್ರಸ್ತಾವನೆಯನ್ನು ತಿರಸ್ಕರಿಸಲಾಗುವುದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಮುಂದುವರೆಯುತ್ತಾ ಪ್ರಾಂಶುಪಾಲರು/ಪ್ರಭಾರ ಪ್ರಾಂಶುಪಾಲರಾಗಿದ್ದಲ್ಲಿ ಅವರ ಪ್ರಸ್ತಾವನೆ ಗಳನ್ನು ಸಲ್ಲಿಸುವ ಮೊದಲು ಅವರು ನಿರ್ವಹಿಸುತ್ತಿರುವ ಪ್ರಾಂಶುಪಾಲರ ಕರ್ತವ್ಯವನ್ನು ಬದಲಿ ವ್ಯವಸ್ಥೆ ಮಾಡಿರುವ ದಾಖಲೆಗಳೊಂದಿಗೆ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

20/05/2022

ಮುಖ್ಯ ಆಡಳಿತಾಧಿಕಾರಿಗಳು

**ಕಾಲೇಜು ಶಿಕ್ಷಣ ಇಲಾಖೆ**

ಇವರಿಗೆ:-

1) ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2) ಹೆಚ್ಚಿನ ಪ್ರತಿ.
3) ಕಛೇರಿ ಪ್ರತಿ.

## ಅನುಬಂಧ-1

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯ ಅಧಿಕಾರಿಗಳು/ನೌಕರರು ವಿದೇಶ ಪ್ರವಾಸ ಕೈಗೊಳ್ಳುವ ಸಂಬಂಧ ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ/ಇಲಾಖೆಗೆ ಸಲ್ಲಿಸಬೇಕಾಗಿರುವ ವಿವರಗಳ/ದಾಖಲೆಗಳ ಪಟ್ಟಿ.

| ಕ್ರಮ. ಸಂಖ್ಯೆ | ವಿವರಗಳು | ಮಾಹಿತಿ (ಪೂರಕ ದಾಖಲಾತಿಗಳಿದ್ದಲ್ಲಿ ಲಗತ್ತಿಸಲಾಗಿರುವ ಬಗ್ಗೆ ನಮೂದಿಸುವುದು) |
|---|---|---|
| 1) | a. ಅಧಿಕಾರಿ/ನೌಕರರ ಹೆಸರು | |
| | b. ಅಧಿಕಾರಿ/ನೌಕರರ ಪದನಾಮ | |
| | c. ಅಧಿಕಾರಿ/ನೌಕರರ ಸ್ಥಳೀಯ ವಿಳಾಸ | |
| 2) | a. ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಸ್ಥಳ, | |
| | b. ದಿನಾಂಕ | |
| | c. ಒಟ್ಟು ಅವಧಿ | |
| | d. ವಿಳಾಸ | |
| 3) | ಪ್ರವಾಸದ ಉದ್ದೇಶ | |
| 4) | a) ಪ್ರವಾಸದ ಒಟ್ಟು ವೆಚ್ಚ ಹಾಗೂ ಭರಿಸುವ ಬಗ್ಗೆ ವೆಚ್ಚ ಭರಿಸಲಾಗುತ್ತಿರುವ ಬ್ಯಾಂಕ್ ಖಾತೆಯ ತಃಖ್ತೆಯ ಪ್ರತಿಯೊಂದಿಗೆ (ಪ್ರವಾಸಕ್ಕೆ ತಗಲುವ ವಿಮಾನದ ವೆಚ್ಚ, ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ ವೆಚ್ಚ, ಸ್ಥಳೀಯ ಸಾರಿಗೆ ವೆಚ್ಚ, ವಸತಿ/ಉಟೋಪಚಾರ ಇತ್ಯಾದಿಗಳ ವೆಚ್ಚದ ಕುರಿತು ಮಾಹಿತಿ/ದಾಖಲಾತಿ)<br>b) ಪ್ರವಾಸದ ವೆಚ್ಚವನ್ನು ಮಗ/ಮಗಳು ಅಥವಾ ಸಂಬಂಧಿಕರು ಭರಿಸುತ್ತಿದ್ದ ಪಕ್ಷದಲ್ಲಿ ಅವರಿಂದ ಪಡೆದ ದೃಢೀಕರಣ ಹಾಗೂ ಸಂಬಂಧಪಟ್ಟವರಿಂದ ಆಹ್ವಾನ ಪತ್ರಿಕೆ.<br>ಸೂಚನೆ:(ಪ್ರವಾಸ ಕೈಗೊಳ್ಳುವ ಅಭ್ಯರ್ಥಿಗಳು ತಮ್ಮ ಬ್ಯಾಂಕ್ ತಃಖ್ತೆಯನ್ನು ಸಹ ಲಗತ್ತಿಸುವುದು) | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| 5) | ಹಕ್ಕಿನಲ್ಲಿರುವ ರಜೆಯ ವಿವರ:<br>a. ಗ್ರೂಪ್ 'ಎ', 'ಬಿ' ವರ್ಗಕ್ಕೆ ಸೇರಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳು ಮಹಾಲೇಖಪಾಲರಿಂದ ಪ್ರಸ್ತುತ ಪಡೆದ ರಜಾ ಶೀರ್ಷಿಕೆ ಲಗತ್ತಿಸುವುದು.<br>b. 'ಬಿ' ವರ್ಗಕ್ಕೆ ಸೇರಿದ ರೂ.6,000/- ಎ.ಜಿ.ಪಿ ಪಡೆಯುತ್ತಿರುವ ಬೋಧಕರು ಮತ್ತು ಗೆಜೆಟೆಡ್ ಮ್ಯಾನೇಜರುಗಳ ಹಾಗೂ 'ಸಿ' ಮತ್ತು 'ಡಿ' ವರ್ಗಕ್ಕೆ ಸೇರಿದ ಸಿಬ್ಬಂದಿಗಳು ಸೇವಾಪುಸ್ತಕದಲ್ಲಿ ದಾಖಲಾಗಿರುವ ರಜೆಯ ವಿವರಗಳನ್ನು ಸಲ್ಲಿಸತಕ್ಕದ್ದು. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| 6) | ಪರೀಕ್ಷಾರ್ಥ ಅವಧಿ ಘೋಷಣೆಯಾಗಿದೆಯೇ? ಆದೇಶ ಪ್ರತಿ ಲಗತ್ತಿಸಿದೆ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| 7) | ಇಲಾಖಾ ವಿಚಾರಣೆ/ನ್ಯಾಯಾಲಯ ಪ್ರಕರಣಗಳು ಇರುವ/ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |

| | | |
|---|---|---|
| ೮) | ವಿದೇಶ ಪ್ರವಾಸದ ಅವಧಿಯಲ್ಲಿ ಬದಲಿ ವ್ಯವಸ್ಥೆಯ ಬಗ್ಗೆ:<br>a. ಬೋಧಕ/ಬೋಧಕೇತರ ಸಿಬ್ಬಂದಿಗಳು ಪ್ರವಾಸ ಕೈಗೊಳ್ಳಲಿರುವುದರಿಂದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಹಾಗೂ ಕಛೇರಿಯಲ್ಲಿನ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆ ಯಾಗುವುದಿಲ್ಲವೆಂದು ಪ್ರಾಂಶುಪಾಲರಿಂದ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | b. ಪ್ರಾಂಶುಪಾಲರು/ಪ್ರಭಾರ ಪ್ರಾಂಶುಪಾಲರು ಸಂಬಂಧಪಟ್ಟ ವ್ಯಾಪ್ತಿಗೆ ಬರುವ ಜಂಟಿ ನಿರ್ದೇಶಕರಿಂದ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | c. ರಜಾ ಅವಧಿಯಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಉದ್ದೇಶಿಸಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಲ್ಲದಿದ್ದರೂ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಮಾಡಿರುವ ಪರ್ಯಾಯ ವ್ಯವಸ್ಥೆ ಬಗ್ಗೆ ಪ್ರಾಂಶುಪಾಲರ ವರದಿ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | d. ಬೋಧನಾ ಸಿಬ್ಬಂದಿ ಕೈಗೊಳ್ಳುವ ವಿದೇಶ ಪ್ರವಾಸದಿಂದ ಪರೀಕ್ಷಾ ಕಾರ್ಯಗಳು ಹಾಗೂ ವಿಶ್ವವಿದ್ಯಾಲಯದ ಇತರೆ ಚಟುವಟಿಕೆಗಳಿಗೆ ಧಕ್ಕೆಯಾಗುವುದಿಲ್ಲ ಎಂಬ ಬಗ್ಗೆ ನಿರಾಕ್ಷೇಪಣಾ ಪತ್ರ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| ೯) | ಸಲ್ಲಿಸಬೇಕಾದ ಇತರೆ ದಾಖಲಾತಿಗಳು<br>a. ಬೇಬಾಕಿ ಪತ್ರ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | b. ಪಾಸ್‌ಪೋರ್ಟ್ ಪ್ರತಿ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | c. ವೀಸಾ ಪ್ರತಿ | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | d. ಅನುಮತಿ ನೀಡಿರುವ ಅವಧಿಗಿಂತ ಹೊರದೇಶ ದಲ್ಲಿ ಉಳಿಯುವುದಿಲ್ಲ ಹಾಗೂ ರಜಾ ಮುಂದುವರೆಸುವ ಬಗ್ಗೆ ಅರ್ಜಿಯನ್ನು ಸಲ್ಲಿಸುವುದಿಲ್ಲ ಮತ್ತು ಹೊರದೇಶದಿಂದ ರಾಜೀನಾಮೆ ಪತ್ರವನ್ನು ಸಲ್ಲಿಸುವುದಿಲ್ಲವೆಂಬ ದೃಢೀಕರಣ ಪತ್ರ. | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |
| | e. ಕಳೆದ ೦೩ ವರ್ಷಗಳ ಆಸ್ತಿ & ಋಣ ಪಟ್ಟಿಗಳು | ಲಗತ್ತಿಸಲಾಗಿದೆ ☐<br>ಲಗತ್ತಿಸಿರುವುದಿಲ್ಲ ☐ |

ಮೇಲ್ಕಂಡ ಮಾಹಿತಿ/ದಾಖಲಾತಿಗಳನ್ನು ಪರಿಶೀಲಿಸಿದ್ದು, ಪ್ರಸ್ತಾವನೆಯೊಂದಿಗೆ ಅಗತ್ಯವಿರುವ ದಾಖಲಾತಿಗಳನ್ನು ಲಗತ್ತಿಸಿದ್ದು, ಸದರಿ ನೌಕರರಿಗೆ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ ಎಂದು ಶಿಫಾರಸ್ಸು ಮಾಡಲಾಗಿದೆ.

ಪ್ರಾಂಶುಪಾಲರು/ಜಂಟಿ ನಿರ್ದೇಶಕರು

ಸಹಿ/ಮೊಹರಿನೊಂದಿಗೆ